## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ.508/2019

**ಪಿಡಬ್ಲೂ-4**

**ಸಿಡಬ್ಲೂ-6**

| | | |
|---|---|---|
| ಸಾಕ್ಷಿದಾರರ ಹೆಸರು | - | ಜಿ.ಚಂದ್ರ |
| ತಂದೆಯ ಹೆಸರು | - | ಲೇಟ್ ಗೋವಿಂದಯ್ಯ |
| ವಯಸ್ಸು | - | 61 |
| ಕೆಲಸ | - | ನಿವೃತ್ತ ಎ.ಎಸ್.ಐ |
| ವಾಸ | - | ಮೈಸೂರು |

**ದಿನಾಂಕ 18-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ನಾನು 2010 ನೇ ಸಾಲಿನಿಂದ 2014 ನೇ ಸಾಲಿನವರೆಗೂ ಮೈಸೂರು ವಿಶೇಷ ದಳ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳದಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ26.07.2012 ರಂದು ಸಂಜೆ 4 ಗಂಟೆ ಸಮಯದಲ್ಲಿ ಚಾಸಾ 1 ರವರು ನನ್ನನ್ನು ಮತ್ತು ಚಾಸಾ 7 ರವರನ್ನು ಕರೆದುಕೊಂಡು ಕೆ.ಆರ್.ನಗರ ಟೌನ್ ನಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಅಲ್ಲಿ ಹೋಗಬೇಕೆಂದು ಕರೆದು ವಿಚಾರ ತಿಳಿಸಿದರು. ನಂತರ ಇಲಾಖಾ ಜೀಪಿನಲ್ಲಿ ನನ್ನನ್ನು ಮತ್ತು ಚಾಸಾ 7 ರವರನ್ನು ಚಾಸಾ 1 ರವರು ಕರೆದುಕೊಂಡು ಮೈಸೂರಿನ ರಾಮಸ್ವಾಮಿ ಸರ್ಕಲ್ ನಲ್ಲಿ ಬಳಿ ಬಂದು ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆಸಿ ಅವರಿಗೆ ದಾಳಿ ಸಂಗತಿಯನ್ನು ತಿಳಿಸಿ ಅವರನ್ನು ಜೊತೆಯಲ್ಲಿ ಕರೆದುಕೊಂಡು ಇಲಾಖಾ ಜೀಪಿನಲ್ಲಿ ಕೆ.ಆರ್.ನಗರ ಟೌನ್ ನ ಮಸೀದಿ ಮುಂಭಾಗ ಸಂಜೆ 5.15 ಕ್ಕೆ ಅಲ್ಲಿ ಬಂದ ನಿಂತುಕೊಂಡು ಕಾಯುತ್ತಿದ್ದಾಗ ಒಬ್ಬ ಆಸಾಮಿಯು ಮೋಟಾರು ಬೈಕಿನಲ್ಲಿ ಮುಂಭಾಗ ಒಂದು ಚೀಲದಲ್ಲಿ ಏನನ್ನೊ ಇಟ್ಟುಕೊಂಡು ಬರುತ್ತಿದ್ದು ಕಂಡುಬಂದು ಅನುಮಾನ ಬಂದಿದ್ದರಿಂದ ಆತನನ್ನ ತಡೆದು ನಿಲ್ಲಿಸಿ ಆತನ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಆತ ತನ್ನ ಹೆಸರು ಜಲೇಂದ್ರ ಬಿನ್ ರಾಮೇಗೌಡ, ತಿಪ್ಪೂರು ಗ್ರಾಮ ಎಂದು ತಿಳಿಸಿರುತ್ತಾನೆ. ನಂತರ ಆತನ ಬಳಿ ಇದ್ದ ಪಾಲಿತಿನ್ ಚೀಲವನ್ನು ಪರೀಕ್ಷಿಸಲಾಗಿ ಆ ಚೀಲದಲ್ಲಿ ಒಟ್ಟು 48 ವಿನ್ಸರ ಡಿಲಕ್ಸ ವಿಸ್ಕಿಯ 180 ಎಂ.ಎಲ್ ನ ಬಾಟೆಲಗಳು ಇರುವುದು ಕಂಡುಬಂದಿತು.

ಸದರಿ ಮದ್ಯದ ಬಗ್ಗೆ ಆತನನ್ನು ವಿಚಾರಿಸಲಾಗಿ ಆತ ತನ್ನ ಬಳಿ ಯಾವುದೇ ಲೈಸೆನ್ಸ ಇಲ್ಲವೆಂದು ತಿಳಿಸಿದ ಮೇರೆಗೆ ಆತ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಕಾರಣ ಪಂಚರ ಸಮಕ್ಷಮ ದೊರತೆ ಮದ್ಯದಲ್ಲಿ ಒಂದು ಬಾಟೆಲನ್ನು ಎಫ್.ಎಸ್.ಎಲ್ ಗಾಗಿ ತೆಗೆದು ಪ್ರತ್ಯೇಕಿಸಿ ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಇಲಾಖಾ ಸೀಲನ್ನು ಹಾಕಿ ಮಾದರಿ ಚೀಟಿಯನ್ನು ಅಂಟಿಸಿ ಸಾಕ್ಷಿಗಳ ಸಹಿಗಳನ್ನು ಪಡೆದುಕೊಂಡು ಅದನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಡಲಾಯಿತು. ಆರೋಪಿ ಘಟನಾ ಸಮಯದಲ್ಲಿ ಓಡಿಸಿಕೊಂಡ ಬಂದ ಬೈಕ್ ಸಂಖ್ಯೆ ಕೆಎ-09-ಇಬಿ-8086 ಆಗಿತ್ತು. ದೊರೆತ ಉಳಿದ ಮದ್ಯ, ಸುತ್ತಲಿ ದಾರ, ಬೈಕ್ ಹಾಗೂ ಪಾಲಿಥಿನ ಚೀಲವನ್ನು ಅಮಾನತ್ತುಪಡಿಸಿಕೊಂಡು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತೇವೆ. ಆಗ ಚಾಸಾ 1 ರವರು ನೀಡಿದ ಉಕ್ತಲೇಖನದ ಮೇರೆಗೆ ನಾನೇ ನನ್ನ ಸ್ವ ಹಸ್ತದಲ್ಲಿ ಮಹಜರ್ ನ್ನು ಬರೆದಿರುತ್ತೇನೆ. ಸಾಕ್ಷಿ ನಿಪಿ 1 ನ್ನು ನೋಡಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಬಿ ಗುರುತಿಸಲಾಯಿತು. ವಶಪಡಿಸಿಕೊಂಡಿರುವ ವಸ್ತುಗಳನ್ನು ಹಾಗೂ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. (ಆರೋಪಿ ಗೈರು ಹಾಜರಿದ್ದು ಅವರನ್ನು ಗುರುತು ಹಚ್ಚುವ ಪ್ರಕ್ರಿಯೆಯಲ್ಲಿ ಆರೋಪಿ ಪರ ವಕೀಲರಲ್ಲಿ ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.)

2. ದಿಃ 28.07.2012 ರಂದು ಸ್ಯಾಂಪಲ್ ಬಾಟೆಲನ್ನು ಬೆಂಗಳೂರಿನ ಎಫ್.ಎಸ್.ಎಲ್ ಕೇಂದ್ರಕ್ಕೆ ನಾನೇ ತೆಗೆದುಕೊಂಡು ಹೋಗಿ ನೀಡಿರುತ್ತೇನೆ. ದಿಃ 27.08.2012 ರಂದು ಅಮಾನತ್ತುಪಡಿಸಿಕೊಂಡ 47 ವಿನ್ಸರ ಡಿಲಕ್ಸ ಬಾಟೆಲನ್ನು, ಒಂದು ಪಾಲಿಥಿನ ಚೀಲ ಮತ್ತು ಸುತ್ತಲಿ ದಾರವನ್ನು ಮತ್ತು ಕೆಎ-09-ಇಬಿ-8086 ನ್ನು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ನಾನು ಅಬಕಾರಿ ಉಪ ಆಯುಕ್ತರ ಆದೇಶದಂತೆ ಕೆ.ಆರ್.ನಗರದ ಅಬಕಾರಿ ನೀರಿಕ್ಷಕರಿಗೆ ವರ್ಗಾವಣೆ ನೀಡಿ ಸ್ವಿಕೃತಿಯನ್ನು ಪಡೆದಿರುತ್ತೇನೆ.

**ಪಾಟೀ ಸವಾಲು: ಶ್ರೀ ಬಿ.ಎಸ್.ಎಮ್ ವಕೀಲರಿಂದ ಆರೋಪಿ ಪರ ವಕೀಲರುಃ**

ನಾನು ಮೇಲಾಧಿಕಾರಿಗಳ ಜೊತೆ ಕೆ.ಆರ್.ನಗರ ಟೌನ್ ಗೆ ಹೋಗಿರುತ್ತೇನೆ. ಪಂಚರು ರಾಮಸ್ವಾಮಿ ಸರ್ಕಲ್ ಬಳಿ ಇದ್ದರು, ಅಲ್ಲಿಂದ ಅವರನ್ನು ಹತ್ತಿಸಿಕೊಂಡು ಟೌನ್ ಗೆ ಬಂದೆವು. ಆರೋಪಿ ವಿರುದ್ಧ ಈ ಹಿಂದೆ ಮದ್ಯ ಸಾಗಾಣಿಕೆ ಮಾಡುತ್ತಿದ್ದಾನೆ ಎಂಬ ದೂರು ಬಂದಿತ್ತಾ ಎಂದರೆ ಸಾಕ್ಷಿ ಅದು ನೀರಿಕ್ಷಕರಿಗೆ ಗೊತ್ತಿರುತ್ತೆ ಎಂದು ನುಡಿಯುತ್ತಾರೆ. ಆರೋಪಿ ವಿರುದ್ಧ ಲಿಖಿತವಾಗಿ ಯಾರು ದೂರು ನೀಡಿರಲಿಲ್ಲ. ಪಂಚರ ವಿಳಾಸ ಗೊತ್ತಿಲ್ಲ. ಮಸೀದಿ ರಸ್ತೆ ತುಂಬಾ ಜನ ಓಡಾಡುವ ರಸ್ತೆ ಎಂದರೆ ಸರಿ. ಅಲ್ಲಿ ನಾವು ಯಾವ ಪಂಚರ ಸಹಿ ಹಾಕಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ 1 ನ್ನು ಮೈಸೂರಿನ ಠಾಣೆಯಲ್ಲಿ ತಯಾರಿಸಿ ಅಲ್ಲೇ ಪಂಚರರ ಸಹಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

2. ಮದ್ಯದ ಬಾಟಲ್ ಎಲ್ಲಿಂದ ತರುತ್ತಿದ್ದ ಎಂದು ನಾನು ದಾಖಲಿ ಹಾಜರುಪಡಿಸಿಲ್ಲ. ನಮ್ಮ ಇಲಾಖಾ ಅಂಕಿ ಅಂಶಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ.ಆರ್ )

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ